**ಕರ್ನಾಟಕ ವಿಧಾನ ಪರಿಷತ್**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 72(89) |
| ಸದಸ್ಯರ ಹೆಸರು | : | ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 27.01.2026 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು. |

**ಪ್ರಶ್ನೆ**

ಅ) ರಾಜ್ಯದ ಎಷ್ಟು ಮಹಾನಗರ ಪಾಲಿಕೆಗಳಲ್ಲಿ ಕುಡಿಯುವ ನೀರನ್ನು ಪರೀಕ್ಷಿಸಲು ಸರ್ಕಾರಿ ಪ್ರಯೋಗಾಲಯಗಳಿವೆ; ನೀರಿನ ಗುಣಮಟ್ಟ ಪರೀಕ್ಷಿಸಲಾಗುತ್ತಿದೆಯೇ; ಎಷ್ಟು ದಿನಗಳಿಗೊಮ್ಮೆ ಪರೀಕ್ಷಿಸಲಾಗುತ್ತಿದೆ; (ಜಿಲ್ಲಾವಾರು ವಿವರ ನೀಡುವುದು)

**ಉತ್ತರ**

**ಪೌರಾಡಳಿತ ನಿರ್ದೇಶನಾಲಯದ ವತಿಯಿಂದ:**

ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಕುಡಿಯುವ ನೀರನ್ನು ಪರೀಕ್ಷಿಸಲು ಸರ್ಕಾರಿ ಪ್ರಯೋಗಾಲಯಗಳು ಹಾಗೂ ನೀರಿನ ಗುಣಮಟ್ಟ ಪರೀಕ್ಷಿಸಲಾಗುತ್ತಿರುವ ಬಗ್ಗೆ ಮಾಹಿತಿ ಮತ್ತು ಎಷ್ಟು ದಿನಗಳಿಗೊಮ್ಮೆ ಪರೀಕ್ಷಿಸಲಾಗುತ್ತಿದೆ ಎಂಬ ವಿವರಗಳು ಈ ಕೆಳಕಂಡಂತಿವೆ.

| ಕ್ರ ಸಂ | ಮಹಾನಗರ ಪಾಲಿಕೆಗಳ ಹೆಸರು | ಕುಡಿಯುವ ನೀರನ್ನು ಪರೀಕ್ಷಿಸಲು ಸರ್ಕಾರಿ ಪ್ರಯೋಗಾಲಯಗಳಿವೆ | ನೀರಿನ ಗುಣಮಟ್ಟ ಪರೀಕ್ಷಿಸಲಾಗುತ್ತಿದೆಯೇ | ಎಷ್ಟು ದಿನಗಳಿಗೊಮ್ಮೆ ಪರೀಕ್ಷಿಸಲಾಗುತ್ತಿದೆ: |
|---|---|---|---|---|
| 1 | ಬಳ್ಳಾರಿ | ಇದೆ | ಹೌದು | ಪ್ರತಿದಿನ |
| 2 | ಬೆಳಗಾವಿ | ಇದೆ | ಹೌದು | ಪ್ರತಿದಿನ |
| 3 | ಮೈಸೂರು | ಇದೆ | ಹೌದು | ಪ್ರತಿದಿನ |
| 4 | ವಿಜಯಪುರ | ಇದೆ | ಹೌದು | ಪ್ರತಿದಿನ |
| 5 | ದಾವಣಗೆರೆ | ಇದೆ | ಹೌದು | ಪ್ರತಿದಿನ |
| 6 | ಶಿವಮೊಗ್ಗ | ಇದೆ | ಹೌದು | ಪ್ರತಿದಿನ |
| 7 | ಬೀದರ್ | ಇದೆ | ಹೌದು | ಪ್ರತಿದಿನ |
| 8 | ಹಾಸನ | ಇದೆ | ಹೌದು | ಪ್ರತಿದಿನ |
| 9 | ತುಮಕೂರು | ಇದೆ | ಹೌದು | ಪ್ರತಿದಿನ |
| 10 | ಹುಬ್ಬಳ್ಳಿ ಧಾರವಾಡ | ಇದೆ | ಹೌದು | ಪ್ರತಿದಿನ |
| 11 | ಮಂಗಳೂರು | ಇದೆ | ಹೌದು | ಪ್ರತಿದಿನ |
| 12 | ರಾಯಚೂರು | ಇದೆ | ಹೌದು | ಪ್ರತಿದಿನ |
| 13 | ಕಲ್ಬುರ್ಗಿ | ಇದೆ | ಹೌದು | ಪ್ರತಿದಿನ |

**ಕೆಯುಐಡಿಎಫ್‌ಸಿ ವತಿಯಿಂದ:**

ಕುಸ್ಸೆಂಫ್ ಯೋಜನೆಯಡಿ ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಮತ್ತು ಕಲಬುರಗಿ ನಗರಗಳಲ್ಲಿ ವಿಶ್ವಬ್ಯಾಂಕ್ ಯೋಜನೆಯಡಿ 24*7 ನೀರು ಸರಬರಾಜಯ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದು, ಇದರ ಜೊತೆಗೆ ಹಾಲಿಯಿರುವ ಕುಡಿಯುವ ನೀರಿನ ಘಟಕಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಮೆ||ಎಲ್&ಟಿ ಲಿಮಿಟೆಡ್ ರವರಿಗೆ ಜೂನ್-2020ರಲ್ಲಿ ಗುತ್ತಿಗೆ ನೀಡಲಾಗಿದೆ. ಸದರಿ ಮೂರು ನಗರಗಳಲ್ಲಿ ಶುದ್ಧೀಕರಣ ಘಟಕದಲ್ಲಿ ಸುಸಜ್ಜಿತ ನೀರು ಪರೀಕ್ಷಾ ಪ್ರಯೋಗಾಲಯವನ್ನು ಈಗಾಗಲೇ ಸ್ಥಾಪಿಸಲಾಗಿದೆ.

| | | |
|---|---|---|
| | | ಸದರಿ ನಗರಗಳಲ್ಲಿ CPHEEO (Central Public Health Environmental Organization) ನಲ್ಲಿ ನಿಗಧಿಪಡಿಸಿರುವ ಮಾನದಂಡದಂತೆ ಕುಡಿಯುವ ನೀರಿನ ಮಾದರಿಗಳನ್ನು ಕಾಲಕಾಲಕ್ಕೆ ಪರೀಕ್ಷಿಸಲಾಗುತ್ತಿದೆ ಹಾಗೂ ಪ್ರತಿದಿನ ಭೌತಿಕ, ರಾಸಾಯನಿಕ ಹಾಗೂ ಜೈವಿಕ ನೀರಿನ ಮಾದರಿಯ ಪರೀಕ್ಷಿಸಿ ಕುಡಿಯುವ ನೀರಿನ ಗುಣಮಟ್ಟವನ್ನು CPHEEO ನಲ್ಲಿ ನಿಗಧಿಪಡಿಸಿರುವ ಮಾನದಂಡದಂತೆ ನೀರಿನ ಮಾದರಿಯನ್ನು ಪರೀಕ್ಷಿಸಲಾಗುತ್ತಿದೆ. |
| ಆ) | ನೀರಿನ ಗುಣಮಟ್ಟ ಪರೀಕ್ಷಿಸಲು ಪ್ರಯೋಗಾಲಯಗಳಿಲ್ಲದ ಮಹಾನಗರ ಪಾಲಿಕೆಗಳಾವುವು; (ವಿವರ ನೀಡುವುದು) | ರಾಜ್ಯದ 13 ಮಹಾನಗರ ಪಾಲಿಕೆಗಳಲ್ಲಿಯೂ ನೀರಿನ ಗುಣಮಟ್ಟ ಪರೀಕ್ಷಿಸಲು ಪ್ರಯೋಗಾಲಯಗಳಿರುತ್ತವೆ. |
| ಇ) | ಪ್ರತಿಯೊಂದು ಮಹಾನಗರ ಪಾಲಿಕೆಗಳಲ್ಲಿ ನೀರಿನ ಗುಣಮಟ್ಟ ಪರೀಕ್ಷಿಸುವ ಪ್ರಯೋಗಾಲಯಗಳನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ನೀರಿನ ಗುಣಮಟ್ಟ ಪರೀಕ್ಷಿಸುವ ಪ್ರಯೋಗಾಲಯಗಳಲ್ಲಿ ಸಿಬ್ಬಂದಿಗಳನ್ನು ನೇಮಿಸಲು ಮಹಾನಗರ ಪಾಲಿಕೆಗಳ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಪ್ರತ್ಯೇಕವಾಗಿ ಹುದ್ದೆಗಳು ಮಂಜೂರಾಗಿರುವುದಿಲ್ಲ. ಆದರೆ ನೀರು ಸಂಸ್ಕರಣಾ ಘಟಕಗಳಲ್ಲಿ ಪ್ರತಿ filter bed ಗೆ ಒಬ್ಬರಂತೆ ಹಾಗೂ ಪ್ರತಿ STPಗೆ ಒಬ್ಬರಂತೆ chemistಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದ್ದು, ಅದರಂತೆ ಪಾಲಿಕೆಗಳ ಹಂತದಲ್ಲಿ ಕ್ರಮವಹಿಸಲಾಗುತ್ತಿದೆ.<br><br>ಅದರಂತೆ ನೀರಿನ ಗುಣಮಟ್ಟ ಪರೀಕ್ಷಿಸುವ ಪ್ರಯೋಗಾಲಯಗಳಲ್ಲಿ ಸಿಬ್ಬಂದಿಗಳನ್ನು ನಿಯೋಜಿಸಿರುವ ಬಗ್ಗೆ ಮಾಹಿತಿಯನ್ನು **ಅನುಬಂಧದಲ್ಲಿ** ನೀಡಲಾಗಿದೆ.<br><br>ಕೆಯುಐಡಿಎಫ್‌ಸಿ ವತಿಯಿಂದ ಗುತ್ತಿಗೆ ಕರಾರಿನಂತೆ ಗುತ್ತಿಗೆದಾರರು ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಮತ್ತು ಕಲಬುರಗಿ ನಗರಗಳ ಪ್ರಯೋಗಾಲಯಗಳಲ್ಲಿ 1 ವಿಶ್ಲೇಷಕರು ಹಾಗೂ 4 ಸಹಾಯಕರ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಲಾಗಿದೆ. |
| ಈ) | ಸದರಿ ಪ್ರಯೋಗಾಲಯಗಳಲ್ಲಿ ಎಷ್ಟು ಜನ ಸಿಬ್ಬಂದಿಗಳನ್ನು ನೇಮಿಸಲಾಗಿದೆ; ಖಾಲಿ ಇರುವ ಹುದ್ದೆಗಳೆಷ್ಟು? (ವಿವರ ನೀಡುವುದು) | |

**ಸಂಖ್ಯೆ: ನಅಇ 43 ಎಂಎನ್‌ಇ 2026 (ಇ)**

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಹಾಗೂ ನಗರ
ಯೋಜನಾ ಸಚಿವರು

Annexure - 1

| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 72(89) ಕ್ಕೆ ಉತ್ತರಿಸುವ ಬಗ್ಗೆ | | | | | | | | |
|---|---|---|---|---|---|---|---|---|
| ಕ್ರಸಂ | ಪಾಲಿಕೆ ಹೆಸರು | ಪಾಲಿಕೆಯ ನೀರಿನ ಗುಣಮಟ್ಟ ಪ್ರಯೋಗಾಲಯದಲ್ಲಿ ಎಷ್ಟು ಜನ ಸಿಬ್ಬಂದಿಗಳನ್ನು ನಿಯೋಜಿಸಿಕೊಳ್ಳಲಾಗಿದೆ ಖಾಲಿ ಇರುವ ಹುದ್ದೆಗಳೆಷ್ಟು (ವಿವರ) ಒದಗಿಸುವುದು | | | | | | ಷರಾ |
| | | ಮಂಜೂರಾದ ಸಂಖ್ಯೆ | ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ | | | | ಖಾಲಿ | |
| | | | ಖಾಯಂ | ಗುತ್ತಿಗೆ | ಹೊರಗುತ್ತಿಗೆ | ದಿನಗೂಲಿ | | |
| 1 | ಮೈಸೂರು | 14 | 0 | 0 | 11 | 0 | 3 | |
| 2 | ಹುಬ್ಬಳ್ಳಿ-ಧಾರವಾಡ | 0 | 0 | 0 | 0 | 0 | 0 | |
| 3 | ಮಂಗಳೂರು | 11 | - | - | 11 | - | 11 | |
| 4 | ದಾವಣಗೆರೆ | 0 | 0 | 0 | 0 | 0 | 0 | KUIDFC ವತಿಯಿಂದ ನಿರ್ವಹಿಸಲಾಗುತ್ತಿದೆ. |
| 5 | ಬೆಳಗಾವಿ | 0 | 0 | 0 | 0 | 0 | 0 | ಬೆಳಗಾವಿ ನಗರಕ್ಕೆ ಕುಡಿಯುವ ನೀರು ಸರಬರಾಜು ಉನ್ನತೀಕರಣಕ್ಕಾಗಿ ನಿರ್ವಾಹಕರಾದ ಮೆ\|\| ಎಲ್ & ಟಿ ಲಿ., ಬೆಳಗಾವಿರವರಿಗೆ ಗುತ್ತಿಗೆಯನ್ನು ನೀಡಲಾಗಿದ್ದು, ನಿರ್ವಾಹಕರ ಅಧೀನದಲ್ಲಿ 10 ಜನ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. |
| 6 | ಶಿವಮೊಗ್ಗ | 3 | 0 | 0 | 3 | 0 | 0 | |
| 7 | ತುಮಕೂರು | - | 0 | 2 | 0 | 0 | 0 | ಪ್ರತಿ ಫಿಲ್ಟರ್ ಬೆಡ್‌ಗೆ ಒಂದು ಪಾಳಿಗೆ ಒಬ್ಬ ಕೆಮಿಸ್ಟ್ ಅನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲು ಮಹಾನಗರಪಾಲಿಕೆ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶವಿದ್ದು, ಅದರಂತೆ ಡಿಎಂಎ ಇಂದ ಅನುಮತಿ ಪಡೆದು ಗುತ್ತಿಗೆ ಆಧಾರದಲ್ಲಿ 2 ಕೆಮಿಸ್ಟ್ ಹುದ್ದೆಗಳನ್ನು ಭರ್ತಿ ಮಾಡಲಾಗಿರುತ್ತದೆ |
| 8 | ಕಲಬುರಗಿ | 0 | 0 | 0 | 0 | 0 | 0 | |
| 9 | ಬಳ್ಳಾರಿ | 0 | 0 | 0 | 0 | 0 | 0 | ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಪರೀಕ್ಷಿಸಲಾಗುತ್ತಿದೆ |

| | | | | | | | | |
|---|---|---|---|---|---|---|---|---|
| 10 | ವಿಜಯಪುರ | 3 | 0 | 0 | 0 | 0 | 3 | ವಿಜಯಪುರ ನಗರಕ್ಕೆ ಕುಡಿಯುವ ನೀರು ಸರಬರಾಜು ನಿರ್ವಹಣೆ ಮತ್ತು ದುರಸ್ಥಿ ಅಡಿಯಲ್ಲಿ ನೀರಿನ ಗುಣಮಟ್ಟವನ್ನು ಪರಿಕ್ಷೀಸುವುದನ್ನು ಗುತ್ತಿಗೆದಾರರಿಂದ ಕೈಗೊಳ್ಳುತ್ತಿದ್ದು, ಗುತ್ತಿಗೆದಾರರ ಆಧೀನದಲ್ಲಿ 3 ಜನ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. |
| 11 | ರಾಯಚೂರು | 0 | 0 | 0 | 2 | 0 | 0 | |
| 12 | ಬೀದರ್ | 2 | 0 | 0 | 2 | 0 | 0 | ಬೀದರ ಮಹಾನಗರ ಪಾಲಿಕೆಯಲ್ಲಿ ಕುಡಿಯುವ ನೀರಿನ ಗುಣಮಟ್ಟವನ್ನು ಪರಿಕ್ಷಿಸುವ ಪ್ರಯೋಗಾಲಯ ನೀರಮನಳ್ಳಿ ತಾಂಡಾ ನೀರು ಶುದ್ಧಿಕರಣ ಘಟಕದಲ್ಲಿ ಸ್ಥಾಪಿಸಲಾಗಿದ್ದು. ದಿನಾಲು ಪರೀಕ್ಷಿಸಿ ನಗರಕ್ಕೆ ನೀರು ಸರಬರಾಜು ಮಾಡಲಾಗುತ್ತಿದೆ. ಹಾಗೂ ಪ್ರತಿ ತಿಂಗಳಿಗೆ NAL LAB, LLP, ಬೆಂಗಳೂರು ರವರಿಗೆ ಬೈಲೋಜಿಕಲ್ ನೀರಿನ ಗುಣಮಟ್ಟ ಪರಿಕ್ಷಿಸಲು ಕಳುಹಿಸಲಾಗುತ್ತಿದೆ. |
| 13 | ಹಾಸನ | 0 | 0 | 0 | 0 | 0 | 0 | ಹಾಸನ ನಗರಸಭೆಯನ್ನು ದಿನಾಂಕ:28/04/2025 ರಂದು ಮಹಾ ನಗರ ಪಾಲಿಕೆಯನ್ನಾಗಿ ಮೇಲ್ದರ್ಜೆಗೇರಿಸಿದ್ದು ಹುದ್ದೆಗಳ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸಿದ್ದು ಹುದ್ದೆ ಮಂಜೂರಾಗಿರುವುದಿಲ್ಲ. |
| | | 33 | 0 | 2 | 29 | 0 | 17 | |

**ಜಂಟಿ ನಿರ್ದೇಶಕರು (ಆ)**

**ಪೌರಾಡಳಿತ ನಿರ್ದೇಶನಾಲಯ**

**ಬೆಂಗಳೂರು**